

بسم اللهِ الرّحمٰنِ الرّحيم

# ಪ್ರವಾದಿ ಚರಿತ್ರೆ – ಖಂದಕ್ ಯುದ್ಧ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–09–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದಲ್ಲಿ ನಾನು ಆಹಾರದಲ್ಲಿ ಉಂಟಾದ ಅನುಗ್ರಹದ ಘಟನೆಯನ್ನು ವಿವರಿಸಿದ್ದೆ. ಅದೇ ರೀತಿಯಲ್ಲಿ ಖರ್ಜೂರಗಳಲ್ಲಿ ಉಂಟಾದ ಅನುಗ್ರಹದ ಘಟನೆಯ ಬಗ್ಗೆಯೂ ಪ್ರಸ್ತಾಪವಿದೆ. ಹಝ್ರತ್ ಬಶೀರ್ ಬಿನ್ ಸಅದ್(ರ)ರ ಪುತ್ರಿ ವಿವರಿಸುತ್ತಾರೆ: ನನ್ನ ತಾಯಿ ನನ್ನ ಬಟ್ಟೆಯಲ್ಲಿ ಸ್ವಲ್ಪ ಖರ್ಜೂರವನ್ನು ಇರಿಸಿ ಅವುಗಳನ್ನು ನನ್ನ ತಂದೆ ಮತ್ತು ಮಾಮರಿಗೆ ಕೊಟ್ಟು ಬರಲು ಹೇಳಿದಳು. ಇದು ನಿಮ್ಮ ಬೆಳಿಗ್ಗಿನ ಆಹಾರವಾಗಿದೆ ಎಂದು ಅವರಿಗೆ ತಿಳಿಸಿ ಎಂದೂ ತಾಯಿ ಹೇಳಿದಳು. ನಾನು ಆ ಖರ್ಜೂರಗಳನ್ನು ತೆಗೆದುಕೊಂಡು ಹೋಗಿ ನನ್ನ ತಂದೆ ಮತ್ತು ಮಾಮರನ್ನು ಹುಡುಕುತ್ತಾ ಹಝ್ರತ್ ಪೈಗಂಬರ್(ಸ)ರ ಸಮೀಪದಿಂದ ದಾಟಿಹೋದೆ. ಹಝ್ರತ್ ಪೈಗಂಬರ್(ಸ) ಕೇಳಿದರು: ಎಲ್ಲೈ ಹುಡುಗಿ, ನಿನ್ನ ಬಳಿ ಅದೇನು? ಇವು ಖರ್ಜೂರಗಳಾಗಿವೆ ಎಂದು ನಾನು ಉತ್ತರಿಸಿದೆ. ಈ ಖರ್ಜೂರಗಳನ್ನು ನನಗೆ ಕೊಡು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ನಾನು ಆ ಖರ್ಜೂರಗಳನ್ನು ಹಝ್ರತ್ ಪೈಗಂಬರ್(ಸ)ರ ಎರಡೂ ಕೈಗಳಲ್ಲಿ ಇರಿಸಿದೆ. ಹಝ್ರತ್ ಪೈಗಂಬರ್(ಸ) ಆ ಖರ್ಜೂರಗಳನ್ನು ಎರಡು ಬಟ್ಟೆಗಳಿಂದ ಮುಚ್ಚಿದರು. ಅನಂತರ ಎಲ್ಲರನ್ನು ತಿನ್ನಲಿಕ್ಕಾಗಿ ಬರಹೇಳಲು ಹಝ್ರತ್ ಪೈಗಂಬರ್(ಸ) ಒಬ್ಬ ವ್ಯಕ್ತಿಗೆ ಆದೇಶ ನೀಡಿದರು. ಕರೆಗೆ ಓಗೊಟ್ಟು ಎಲ್ಲರೂ ಬಂದರು ಮತ್ತು ಖರ್ಜೂರಗಳನ್ನು ತಿನ್ನಲು ತೊಡಗಿದರು. ಆ ಖರ್ಜೂರಗಳು ಅಧಿಕವಾಗಲು ತೊಡಗಿತು. ಕೊನೆಗೆ ಎಲ್ಲರೂ ತಿಂದಾದಾಗಲೂ ಖರ್ಜೂರಗಳು ಬಟ್ಟೆಗಳ ಅಂಚಿನಿಂದ ಕೆಳಗೆ ಬೀಳುತ್ತಿದ್ದುವು.

(ಆಹಾರದಲ್ಲಿ ಉಂಟಾದ ಅನುಗ್ರಹದ ಮತ್ತೊಂದು ಘಟನೆಯನ್ನು ವಿವರಿಸಿದ ನಂತರ ಹಝ್ರತ್ ಮಸೀಹ್ ಮೌಊದ್(ರ)ರ ಲಿಖಿತಗಳಿಂದ **ಸಾಲಿಕ್‌ನ** ಸ್ಥಾನ ಮತ್ತು **ಲಿಖಾದ** (ದೇವದರ್ಶನದ) ಪದವಿಗಳ ಕುರಿತು ಹುಝೂರ್ ಹೀಗೆ ಹೇಳಿದರು:) ಅವರು ಯಾವ ರೀತಿಯಲ್ಲಿ ಅಲ್ಲಾಹನ ಸಾಮಿಪ್ಯ ಗಳಿಸುತ್ತಾರೆಂದರೆ, ಬೆಂಕಿಯನ್ನಲ್ಲದೇ ಬೇರೇನನ್ನೂ ಕಾಣದ ರೀತಿಯಲ್ಲಿ ಬೆಂಕಿ ಲೋಹದ ಬಣ್ಣವನ್ನು ತನ್ನೊಳಗೆ ಅಡಗಿಸುತ್ತದೆಯೋ ಅದೇ ರೀತಿಯಲ್ಲಿ **ಸಾಲಿಕನು** ದೇವನ ಸಾಮೀಪ್ಯವನ್ನು ಗಳಿಸುತ್ತಾನೆ. **ಲಿಖಾದ** ಈ ಪದವಿಯಲ್ಲಿ ಕೆಲವೊಮ್ಮೆ ಮನುಷ್ಯನಿಂದ ಮಾನುಷಿಕ ಶಕ್ತಿಗೂ ಮೀರಿದ ಕೆಲಸಗಳು ಪ್ರಕಟವಾಗುತ್ತವೆ. ಆತನು ತನ್ನೊಳಗೆ ದೈವಿಕ ಶಕ್ತಿಯನ್ನು ಇರಿಸಿಕೊಂಡಿರುತ್ತಾನೆ. ಉದಾಹರಣೆಗೆ ನಮ್ಮ ನೇತಾರ ಮತ್ತು ಪ್ರವಾದಿಗಳ ಸರದಾರ ಹಝ್ರತ್ ಖಾತಮುಲ್ ಅಂಬಿಯಾ(ಸ) ಬದ್ರ್ ಯುದ್ಧದಲ್ಲಿ ಒಂದು ಮುಷ್ಟಿಯಷ್ಟು ಮರಳನ್ನು ಸತ್ಯನಿಷೇಧಿಗಳ ಕಡೆಗೆ ಎಸೆದರು. ಆ ಮುಷ್ಟಿಯಷ್ಟು ಮಣ್ಣನ್ನು ಯಾವುದೇ ದುಆದ ಮೂಲಕವಲ್ಲ ಬದಲಾಗಿ ತನ್ನ ಆಧ್ಯಾತ್ಮಿಕ ಶಕ್ತಿಯಿಂದ ಅವರು ಎಸೆದರು. ಆದರೆ ಆ ಮುಷ್ಟಿ ದೈವಿಕ ಶಕ್ತಿ ತೋರಿಸಿತು ಮತ್ತು ವಿರೋಧಿ ಸೇನೆಯ ಮೇಲೆ ಎಂತಹ ಅಸಾಧಾರಣವಾದ ಪ್ರಭಾವ ಉಂಟುಮಾಡಿತ್ತು ಎಂದರೆ, ಅದರ ಪ್ರಭಾವ ಉಂಟಾಗದ ಯಾರೂ ಅವರಲ್ಲಿ ಇರಲಿಲ್ಲ. ಇದೇ ರೀತಿಯ ಬೇರೆಯೂ ಪವಾಡಗಳನ್ನು ಹಝ್ರತ್ ಪೈಗಂಬರ್(ಸ) ತನ್ನ ಸ್ವಂತ ಶಕ್ತಿಯಿಂದಲೇ ತೋರಿಸಿದ್ದರು. ಅದರ ಜೊತೆಗೆ ದುಆ ಇದ್ದಿರಲಿಲ್ಲ.

ಕಂದಕವನ್ನು ಅಗೆಯುವ ವೇಳೆ ಅನೇಕ ಕಪಟವಿಶ್ವಾಸಿಗಳು ಹಝ್ರತ್ ಪೈಗಂಬರ್(ಸ) ಮತ್ತು ಮುಸ್ಲಿಮರ ಜೊತೆಗೆ ಇದ್ದುಕೊಂಡು ಅಗೆಯುವ ಕೆಲಸದಲ್ಲಿ ಆಲಸ್ಯ ತೋರಿಸಿದರು. ಅವರು ಸ್ವಲ್ಪ ಕೆಲಸ ಮಾಡುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರೊಡನೆ ಹೇಳದೇ ಮತ್ತು ಅನುಮತಿ ಕೇಳದೇ ಕಣ್ಣು ತಪ್ಪಿಸಿ ಮನೆಗಳಿಗೆ ಹೋಗುತ್ತಿದ್ದರು. ಆದರೆ ಸತ್ಯವಿಶ್ವಾಸಿಗಳಿಗೆ ಏನಾದರೂ ಅಗತ್ಯ ಬರುವುದಾದರೆ ಅವರು ಹಝ್ರತ್ ಪೈಗಂಬರ್(ಸ)ರಿಂದ ಅನುಮತಿ ಕೇಳುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ) ಅವರಿಗೆ ಅನುಮತಿ ಕೊಡುತ್ತಿದ್ದರು.

ವರದಿಗಳ ಪ್ರಕಾರ ಅಬೂಸುಫ್‌ಯಾನಿನ ಸೇನೆಯ ಆಗಮನಕ್ಕೆ ಮೂರು ದಿನಗಳಿಗೆ ಮುಂಚಿತವಾಗಿ ಕಂದಕ ತಯಾರಾಗಿತ್ತು. ಈಗ ಯೋಜನೆಯ ಪ್ರಕಾರ ಮಕ್ಕಳು ಮತ್ತು ಯುವಕರನ್ನು ಆ ಕೋಟೆಗಳ ಕಡೆಗೆ ಕಳುಹಿಸಲಾಯಿತು. ಅಲ್ಲಿ ಮಹಿಳೆಯರನ್ನು ಸಂರಕ್ಷಣೆಗಾಗಿ ಸ್ಥಳಾಂತರಿಸಲಾಗಿತ್ತು. ಆದರೆ ಯುವಕರಲ್ಲಿ 15 ವರ್ಷಕ್ಕೆ ಮೇಲ್ಪಟ್ಟವರಿಗೆ ಇಷ್ಟವಿದ್ದಲ್ಲಿ ಅಲ್ಲೇ ಇರಲು ಅಥವಾ ಕೋಟೆಗಳ ಕಡೆಗೆ ಹೋಗಲು ಅನುಮತಿ ಕೊಡಲಾಗಿತ್ತು.

ಹಝ್ರತ್ ಪೈಗಂಬರ್(ಸ) ಮದೀನದಲ್ಲಿ ಉಮ್ಮೆ ಮಕ್ತೂಮರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದ್ದರು. ಕಂದಕದ ಬಳಿ ಹಝ್ರತ್ ಪೈಗಂಬರ್(ಸ)ರಿಗಾಗಿ ಚರ್ಮದ ಡೇರೆಯನ್ನು ಹಾಕಲಾಗಿತ್ತು. ಮುಹಾಜಿರರ ಧ್ವಜ ಹಝ್ರತ್ ಝೈದ್ ಬಿನ್ ಹಾರಿಸ(ಸ) ಮತ್ತು ಅನ್ಸಾರರ ಧ್ವಜ ಹಝ್ರತ್ ಸಅದ್ ಬಿನ್ ಉಬಾದ(ರ)ರ ಬಳಿಯಲ್ಲಿತ್ತು.

ಮುಸ್ಲಿಮರ ಸಂಖ್ಯೆಯ ಕುರಿತು ಚರಿತ್ರೆಗಾರರಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಈ ಸಂಖ್ಯೆ 700ರಿಂದ 3000ದಷ್ಟು ಇತ್ತು ಎಂದು ವರದಿಗಳಿವೆ. ಹಝ್ರತ್ ಮುಸ್ಲಿಹ್ ಮೌಊದ್(ರ)

ಬಹಳ ಯುಕ್ತಿ ಪೂರ್ವಕವಾಗಿ ಈ ಎಲ್ಲ ವರದಿಗಳನ್ನು ಹೊಂದಾಣಿಕೆಗೊಳಿಸಿ ಹೀಗೆ ಹೇಳುತ್ತಾರೆ: ಅಹ್‌ಝಾಬ್ ಯುದ್ಧದ ಮೂರು ಭಾಗಗಳಿದ್ದುವು. ಅದರ ಒಂದು ಭಾಗವು ಶತ್ರುಗಳು ಇನ್ನೂ ಮದೀನದ ಹತ್ತಿರ ಬಂದಿರದ ವೇಳೆ ಮತ್ತು ಕಂದಕವನ್ನು ಅಗೆಯುವ ಸಮಯದ್ದಾಗಿತ್ತು. ಈ ಕೆಲಸದಲ್ಲಿ ಕನಿಷ್ಠ ಪಕ್ಷ ಮಣ್ಣು ಹಾಕುವ ಕೆಲಸವನ್ನು ಮಕ್ಕಳು ಮತ್ತು ಮಹಿಳೆಯರು ಕೂಡ ಮಾಡಬಹುದಾಗಿತ್ತು. ಆದ್ದರಿಂದ ಕಂದಕವನ್ನು ಅಗೆಯುವ ಕೆಲಸದ ಸಮಯದಲ್ಲಿ ಮುಸ್ಲಿಮ್ ಸೇನೆಯಲ್ಲಿ ಮೂರು ಸಾವಿರ ಜನರಿದ್ದರು. ಅನಂತರ ಶತ್ರುಗಳು ಬಂದಾಗ ಮತ್ತು ಯುದ್ಧ ಆರಂಭವಾದಾಗ ಹದಿನೈದು ವರ್ಷಕ್ಕಿಂತ ಕಡಿಮೆ ಪ್ರಾಯದ ಹುಡುಗರೊಡನೆ ಮರಳಿ ಹೋಗಲು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದರು. ಹದಿನೈದು ವರ್ಷ ಪ್ರಾಯದವರೊಡನೆ ಬೇಕಾದರೆ ಇರಲು ಅಥವಾ ಹೋಗಬೇಕಾದರೆ ಹೋಗಲು ಅನುಮತಿ ನೀಡಲಾಯಿತು. ಕಂದಕವನ್ನು ಅಗೆಯುವ ಸಮಯದಲ್ಲಿ ಮುಸ್ಲಿಮರ ಸಂಖ್ಯೆ ಹೆಚ್ಚಿತ್ತು ಮತ್ತು ಯುದ್ಧದ ಸಮಯದಲ್ಲಿ ಕಡಿಮೆಯಿತ್ತು ಎಂದು ಈ ವರದಿಯಿಂದ ಗೊತ್ತಾಗುತ್ತದೆ. 1200ರ ಸಂಖ್ಯೆ ಯುದ್ಧ ಆರಂಭವಾದ ಸಮಯದ್ದಾಗಿದೆ. ಯುದ್ಧದ ವೇಳೆ ಬನೂ ಖುರೈಝಾ ಗೋತ್ರದವರು ಸತ್ಯನಿಷೇಧಿಗಳ ಸೇನೆಯೊಂದಿಗೆ ಸೇರಿಕೊಂಡರು. ಮದೀನದ ಮೇಲೆ ದಿಢೀರನೆ ದಾಳಿ ನಡೆಸಲು ಅವರು ನಿರ್ಧರಿಸಿದ್ದರು. ಆದ್ದರಿಂದ ಬನೂ ಖುರೈಝಾ ಗೋತ್ರವಿದ್ದ ಭಾಗದ ಸಂರಕ್ಷಣೆ ಅಗತ್ಯವೆಂದು ಹಝ್ರತ್ ಪೈಗಂಬರ್(ಸ) ಮನವರಿಕೆ ಮಾಡಿದರು. ಚರಿತ್ರೆಯಿಂದ ಗೊತಾಗುವುದೇನೆಂದರೆ, ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಎರಡು ಸೇನೆಗಳನ್ನು ಮಹಿಳೆಯರ ಸಂರಕ್ಷಣೆಗಾಗಿ ಕಳುಹಿಸಿದರು. ಅವುಗಳಲ್ಲಿ ಒಂದು ಸೇನೆಯಲ್ಲಿ ಇನ್ನೂರು ಸಿಪಾಯಿಗಳು ಮತ್ತೊಂದು ಸೇನೆಯಲ್ಲಿ ಮುನ್ನೂರು ಸಿಪಾಯಿಗಳು ಇದ್ದರು. ಹೀಗೆ 1200 ಸೈನಿಕರಲ್ಲಿ ಐನ್ನೂರು ಸೈನಿಕರು ಮಹಿಳೆಯರ ಸಂರಕ್ಷಣೆಗಾಗಿ ಹೋದಾಗ 1200 ಸಿಪಾಯಿಗಳ ಸೇನೆಯಲ್ಲಿ 700 ಸಿಪಾಯಿಗಳು ಬಾಕಿಯುಳಿದರು.

ಅಬೂಸುಫ್‌ಯಾನನ ಮುಂದಾಳುತ್ವದಲ್ಲಿ ಗೋತ್ರಗಳ ಸೇನೆ ಮದೀನಕ್ಕೆ ತಲುಪಿ ಕಂದಕದ ಸುತ್ತ ಡೇರೆಗಳನ್ನು ಹಾಕಿದರು. ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಸತ್ಯನಿಷೇಧಿಗಳ ಸೇನೆ ಮದೀನದ ಸಮೀಪಕ್ಕೆ ತಲುಪಿದಾಗ ತಮ್ಮ ಮುಂದೆ ಕಂದಕವನ್ನು ನೋಡಿ ಅವರು ಆಶ್ಚರ್ಯಗೊಂಡರು. ಹಾಗೆ ಸತ್ಯನಿಷೇಧಿಗಳು ಕಂದಕದ ಸುತ್ತ ಮುತ್ತಿಗೆ ಎಂಬಂತೆ ಡೇರೆ ಹಾಕಿಕೊಂಡರು. ಕಂದಕದ ದುರ್ಬಲ ಭಾಗದಿಂದ ಆಕ್ರಮಣ ನಡೆಸಲು ಅವರು ಸಂದರ್ಭ ಹುಡುಕುತ್ತಿದ್ದರು. ಶತ್ರುಗಳು ಕಂದಕವನ್ನು ಪಾರು ಮಾಡುವುದರಲ್ಲಿ ವಿಫಲಗೊಂಡಾಗ ಅವರು ಬೇರೆ ತಂತ್ರಗಳನ್ನು ಹುಡುಕಲು ಯತ್ನಿಸಿದರು. ಬನೂ ಖುರೈಝಾ ಗೋತ್ರದವರನ್ನು ತಮ್ಮ ಜೊತೆಗೆ ಸೇರಿಸಿಕೊಂಡು ಅವರು ಮುಸ್ಲಿಮರ ಜೊತೆಗೆ ಮಾಡಿರುವ ಒಪ್ಪಂದವನ್ನು ಮುರಿಯುವಂತೆ ಮಾಡಲು ಮತ್ತು ಮುಸ್ಲಿಮರ ಮೇಲೆ ಒಳಗಿನಿಂದಲೇ ಆಕ್ರಮಣ ನಡೆಸುವಂತೆ ಮಾಡಲು ಮುಶ್ರಿಕರು ಪರಸ್ಪರ ತೀರ್ಮಾನಿಸಿದರು. ಹೀಗೆ ಈ ಭಯಾನಕವಾದ ಕುತಂತ್ರ ನಡೆಯುವಂತಾಗಲು ಬನೂ ಖುರೈಝಾದ ಸರದಾರ ಕಅ್‌ಬ್ ಬಿನ್ ಅಸದ್‌ನ ಬಳಿಗೆ ಹುಯ್ಯ್ ಬಿನ್ ಅಖ್ತಬ್ ಹೋದನು. ಆರಂಭದಲ್ಲಿ ಹುಯ್ಯ್‌ನನ್ನು ಬರಮಾಡಿಕೊಳ್ಳಲು ಆತನು ಬಾಗಿಲನ್ನು ಕೂಡ ತೆರೆಯಲಿಲ್ಲ ಮತ್ತು ತಾನು ಮುಹಮ್ಮದ್(ಸ)ರೊಂದಿಗೆ ಒಪ್ಪಂದ ಮಾಡಿಕೊಂಡಿದ್ದೇನೆ ಹಾಗೂ ಮುಹಮ್ಮದ್(ಸ) ಸದಾ ವಾಗ್ದಾನಗಳನ್ನು ಈಡೇರಿಸುವವರನ್ನಾಗಿ ನಾನು ಕಂಡಿದ್ದೇನೆ ಎಂದು ಆತನು ಉತ್ತರಿಸಿದನು. ಆದರೆ ಹುಯ್ಯ್ ಬಹಳ ಒತ್ತಾಯಪೂರ್ವಕವಾಗಿ ಹೇಳಿದಾಗ ಕಅ್‌ಬ್ ಬಾಗಿಲನ್ನು ತೆರೆದನು ಮತ್ತು ಆತನ ಮನವಿ ಪ್ರಕಾರ ಮುಸ್ಲಿಮರ ವಿರುದ್ಧ ಈ ಭಯಾನಕ ಕುತಂತ್ರದಲ್ಲಿ ಭಾಗಿಯೂ ಆದನು ಹಾಗೂ ಮುಸ್ಲಿಮರ ಜೊತೆಗೆ ಮಾಡಿದ ಒಪ್ಪಂದವನ್ನು ಕೂಡ ಮುರಿದನು.

ಈ ಹಂತದಲ್ಲಿ ಬನೂ ಖುರೈಝಾದ ಯಹೂದಿಯರಲ್ಲಿ ಉತ್ತಮ ಸ್ವಭಾವಿಗಳಾದ ಕೆಲವು ಜನರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದರು ಮತ್ತು ಮುಸ್ಲಿಮರಾದರು. ಬನೂ ಖುರೈಝಾ ಗೋತ್ರವು ಒಪ್ಪಂದವನ್ನು ಮುರಿದಿರುವ ವಿಷಯ ಹಝ್ರತ್ ಪೈಗಂಬರ್(ಸ)ರಿಗೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರ ಮೂಲಕ ಗೊತ್ತಾದಾಗ ಅವರು ಬನೂ ಖುರೈಝಾ ಗೋತ್ರದ ಬಳಿಗೆ ಸಅದ್ ಬಿನ್ ಮುಆಧ್(ರ) ಮತ್ತು ಸಅದ್ ಬಿನ್ ಉಬಾದ(ರ)ರನ್ನು ಕೆಲವು ಸಹಾಬಿಯರ ಜೊತೆಗೆ ಕಳುಹಿಸಿದರು. ಈ ವಾರ್ತೆ ಸರಿ ಎಂದಾದರೆ ಎಲ್ಲರ ಮುಂದೆ ಉಚ್ಚ ಸ್ವರದಲ್ಲಿ ತಿಳಿಸಬಾರದು ಬದಲಾಗಿ ಸೂಚನೆ ಮೂಲಕ ತಿಳಿಸಬೇಕು ಎಂದು ಅವರಿಗೆ ಹಝ್ರತ್ ಪೈಗಂಬರ್(ಸ) ನಿರ್ದೇಶನ ನೀಡಿದರು. ಅವರು ಬನೂ ಖುರೈಝಾ ಗೋತ್ರದ ಬಳಿಗೆ ತಲುಪಿದಾಗ ಆ ಜನರೊಡನೆ ಕಅ್‌ಬ್ ಬಿನ್ ಅಸದ್ ಬಹಳ ನೀಚವಾಗಿ ವರ್ತಿಸಿದನು ಮತ್ತು ಪ್ರತಿಜ್ಞೆ ಪಾಲಿಸುವುದನ್ನು ಸ್ಪಷ್ಟವಾಗಿ ನಿರಾಕರಿಸಿದನು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: ಆ ನತದೃಷ್ಟ ಕಅ್‌ಬ್ ಬಿನ್ ಅಸದ್ ಆ ಸಂಘದೊಂದಿಗೆ ಅತ್ಯಂತ ಅಹಂಕಾರದಿಂದ ವರ್ತಿಸಿದನು. ಇಬ್ಬರು ಸಅದರು ಒಪ್ಪಂದದ ಬಗ್ಗೆ ಪ್ರಸ್ತಾಪಿಸಿದಾಗ ಆತನು ಮತ್ತು ಆತನ ಗೋತ್ರದವರು ಹೀಗೆ ಹೇಳಿದರು: ಹೋಗು ನಮ್ಮ ಮತ್ತು ನಿಮ್ಮ ನಡುವೆ ಯಾವುದೇ ಒಪ್ಪಂದವಿಲ್ಲ. ಕಅ್‌ಬ್ ಬಿನ್ ಅಸದ್‌ನ ಈ ಉತ್ತರವನ್ನು ಆಲಿಸಿದ ನಂತರ ಆ ಸಂಘ ಮರಳಿ ಬಂದು ಹಝ್ರತ್ ಪೈಗಂಬರ್(ಸ)ರಿಗೆ ಬನೂ ಖುರೈಝಾ ಗೋತ್ರ ಒಪ್ಪಂದವನ್ನು ಮುರಿದ ಬಗ್ಗೆ ಸೂಚ್ಯವಾಗಿ ತಿಳಿಸಿದರು. ಬಲಗುಂದಿಸುವಂತಹ ಮತ್ತು ಮೂರ್ಛೆ ಹೋಗಿಸುವಂತಹ ಆ ಕ್ಷಣದಲ್ಲಿ ಹಝ್ರತ್ ಪೈಗಂಬರ್(ಸ) ಸ್ವಲ್ಪ ಸಮಯ ಮೌನವಾದರು. ಈ ವಾರ್ತೆಯ ಯಾವುದೇ ಪ್ರಭಾವ ಅವರಲ್ಲಿ ಉಂಟಾಗಲಿಲ್ಲ. ಇಂತಹ ವಾರ್ತೆಯಿಂದ ಸಾಧಾರಣ ಮನುಷ್ಯನ ಬಲಗುಂದಿ ಹೋಗುತ್ತಿತ್ತು. ಸ್ವಲ್ಪ ಸಮಯದ ಮೌನದ ನಂತರ ಹಝ್ರತ್ ಪೈಗಂಬರ್(ಸ) ಹೇಳಿದರು: ಎಲೈ ಸತ್ಯವಿಶ್ವಾಸಿಗಳ ಸಂಘವೇ, ಅಲ್ಲಾಹನ ಸಹಾಯ ಮತ್ತು ನೆರವಿನ ಜೊತೆಗೆ ಸಂತೋಷದಿಂದಿರಿ. ನನಗೆ ದೃಢವಿಶ್ವಾಸವಿದೆ. ಒಂದು ಕಾಲ ಬರುವುದು. ಆಗ ನಾನು ಕಅ್‌ಬ ಭವನದ ಪರಿಕ್ರಮಣ ಮಾಡುವೆನು ಮತ್ತು ಅದರ ಕೀಲಿಗೈಗಳು ನನ್ನ ಕೈಗಳಲ್ಲಿ ಇರುವುವು ಹಾಗೂ ಇರಾನ್ ಮತ್ತು ರೋಮ್ ಸಾಮ್ರಾಜ್ಯಗಳು ಖಂಡಿತವಾಗಿಯೂ ನಾಶವಾಗುವುವು.

(ಖ಼ಂದಕ ಯುದ್ಧದ ವಿವರಣೆಯನ್ನು ಮುಂದಿನ ಬಾರಿ ವಿವರಿಸಲಾಗುವುದು ಎಂದು ಹೇಳಿದ ನಂತರ ಹುಝೂ಼ರ್ ಹೇಳಿದರು:) ಇಂದಿನಿಂದ ಖು಼ದ್ದಾಮುಲ್ ಅಹ್ಮದಿಯಾದ ಇಜ್ತಿಮಾ ಸಹ ಆರಂಭವಾಗುತ್ತಿದೆ. ಖು಼ದ್ದಾಮ್ ಅದರಿಂದ ಸಂಪೂರ್ಣವಾದ ಪ್ರಯೋಜನವನ್ನು ಪಡೆಯಲು ಪ್ರಯತ್ನಿಸಬೇಕು. ಮಳೆ ಬರುವುದು ಎಂದು ಹವಾಮಾನ ಮುನ್ಸೂಚನೆ ಇದೆಯಾದರೂ ಅಲ್ಲಾಹನು ಕೃಪೆದೋರಲಿ ಮತ್ತು ಎಲ್ಲ ಕಾರ್ಯಕ್ರಮಗಳು ಸುಗಮವಾಗಿ ನಡೆಯಲಿ. ಖು಼ದ್ದಾಮ್ ಈ ದಿನಗಳಲ್ಲಿ ಆಧ್ಯಾತ್ಮಿಕ ಮತ್ತು ಅರಿವಿನ ಮಟ್ಟವನ್ನು ವರ್ಧಿಸಲು ಪ್ರಯತ್ನಿಸಬೇಕು. ನಾನು ಗಮನ ಸೆಳೆದಿದ್ದ ಮತ್ತು ಮನವಿ ಮಾಡಿದ್ದ ಪ್ರಾರ್ಥನೆ ಮತ್ತು ದುರೂದಿನ ಕಡೆಗೆ ಈ ದಿನಗಳಲ್ಲಿ ವಿಶೇಷವಾದ ಗಮನ ನೀಡಿರಿ. ಸದಾ ಅವುಗಳನ್ನು ಪಠಿಸುತ್ತಿರಿ.

ಖುತ್ಬದ ಕೊನೆಯಲ್ಲಿ ನಾಲ್ವರು ದಿವಂಗತರ ಬಗ್ಗೆ ಮತ್ತು ಅವರ ಸೇವೆಗಳ ಬಗ್ಗೆ ಹುಝೂ಼ರ್ ಪ್ರಸ್ತಾಪಿಸಿದರು ಹಾಗೂ ಎಲ್ಲ ದಿವಂಗತರ ಮಗ್ಫ಼ಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُبِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 20-09-2024

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****:* *khutuba.kannada@gmail.com*

**You can find all the Sermons archived at**: www.alislam.org/friday-sermon